# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: Lifting of water from Arkavathy river to provide Micro Irrigation system to the lands of Doddalahalli, Uyyamballi, Hegganuru and Yelagalli panchayath limits in Kanakapura Taluk ಯೋಜನೆಯ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

*ಓದಲಾಗಿದೆ :-*

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-2/ಎಂ.ಪಿ.ಡಿ-244/2018-19/3495, ದಿನಾಂಕ:16-01-2019.

*ಪ್ರಸ್ತಾವನೆ :-*

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು ಮತ್ತು ಕನಕಪುರ ತಾಲ್ಲೂಕುಗಳು ಡಾ॥ ಡಿ.ಎಂ.ನಂಜುಡಪ್ಪ ರವರ ವರದಿಯ ಪ್ರಕಾರ ಹಿಂದುಳಿದ ಪ್ರದೇಶಗಳಾಗಿದ್ದು, ಈ ಭಾಗದಲ್ಲಿ ರೈತರು ವ್ಯವಸಾಯಕ್ಕಾಗಿ ಮಳೆಯ ನೀರನ್ನೇ ಆಶ್ರಯಿಸುತ್ತಾರೆ ಹಾಗೂ ಮಳೆಗಾಲವು ಸಮರ್ಪಕವಾಗಿ ಆಗದೇ ಇರುವ ಕಾರಣ, ಅಂತರ್ಜಲವು ಕುಸಿದಿರುವುದರಿಂದ ಕೃಷಿ ಚಟುವಟಿಕೆಗಳಿಗೆ ಹಾಗೂ ಜನ-ಜಾನುವಾರುಗಳ ಕುಡಿಯುವ ನೀರಿಗೂ ಸಮಸ್ಯೆ ಉಂಟಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

2. ಈ ತಾಲ್ಲೂಕುಗಳ ಪ್ರದೇಶದಲ್ಲಿ ಹರಿಯುವ ಏಕೈಕ ನದಿಯಾದ ಅರ್ಕಾವತಿ ನದಿಗೆ ಆರೋಬೆಲೆ ಗ್ರಾಮದ ಹತ್ತಿರ ಅಣೆಕಟ್ಟನ್ನು ನಿರ್ಮಿಸಲಾಗಿದ್ದು, ಇದರಿಂದ ಕಾಲುವೆಗಳ ಮೂಲಕ 6232 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿರುತ್ತದೆ. ಅರ್ಕಾವತಿ ಜಲಾಶಯದ ಎಡದಂಡೆ, ಬಲದಂಡೆ, ಎಡದಂಡೆ ಏತ ನೀರಾವರಿ ಹಾಗೂ ಬಲದಂಡೆ ಏತ ನೀರಾವರಿ ಕಾಲುವೆಗಳ ಮೂಲಕ ನೀರನ್ನು ಕೃಷಿ ಚಟುವಟಿಕೆಗಳಿಗೆ ಒದಗಿಸಲಾಗುತ್ತಿದೆ.

3. ಬಲದಂಡೆ ನಾಲೆಯು 22.50 ಕಿಮೀ ಉದ್ದವಿದ್ದು 41 ತೂಬುಗಾಲುವೆಗಳನ್ನು ಹೊಂದಿರುತ್ತದೆ ಬಲದಂಡೆ ನಾಲೆಯ ಕೊನೆಯ ಅಂಚಿನಲ್ಲಿ ಹೆಗ್ಗನೂರು, ಏಳಿಗೆಹಳ್ಳಿ, ಕಾಡಶಿವನದೊಡ್ಡಿ, ಕುಪ್ಪದೊಡ್ಡಿ ಹಾಗೂ ವೆಂಡರ್ ಲಿಂಗೇಗೌಡನದೊಡ್ಡಿ ಗ್ರಾಮಗಳಿದ್ದು, ಈ ಗ್ರಾಮಗಳಲ್ಲಿ ಕೃಷಿ ಯೋಗ್ಯ ಜಮೀನುಗಳು ನಾಲೆಯ ನೀರಿನ ಮಟ್ಟಕ್ಕಿಂತ ಸುಮಾರು 35 ರಿಂದ 70 ಮೀಟರ್ ನಷ್ಟು ಎತ್ತರದ ಪ್ರದೇಶದಲ್ಲಿರುತ್ತವೆ. ನೀರಾವರಿ ವಂಚಿತ ಒಣ ಬೇಸಾಯ ಕೃಷಿಕರು ಉದ್ಯೋಗವನ್ನು ಅರಸಿ ನಗರ ಪಟ್ಟಣಗಳತ್ತ ವಲಸೆ ಹೋಗುತ್ತಿರುತ್ತಾರೆ.

4. ಈ ಹಿನ್ನೆಲೆಯಲ್ಲಿ, ದೊಡ್ಡಲಹಳ್ಳಿ, ಉಯ್ಯಂಬಳ್ಳಿ, ಹೆಗ್ಗನೂರು ಮತ್ತು ಯಲಗಳ್ಳಿ ಪಂಚಾಯಿತಿಗೆ ಹನಿ ನೀರಾವರಿ ಯೋಜನೆಯಿಂದ ಸುಮಾರು 1012 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲು ಉದ್ದೇಶಿಸಲಾಗಿದೆ. ಅಲ್ಲದೇ, ಈ ಪ್ರದೇಶದ ಖಾರಿಫ್, ರಬಿ ಮತ್ತು ಎರಡೂ ಋತುಗಳ ಬೆಳೆಗಳಿಗೆ ಹನಿ/ತುಂತುರು ನೀರಾವರಿ ಅಳವಡಿಸಿ ನೀರಿನ ಸದ್ಬಳಕೆಯನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

5. **ನೀರಿನ ಲಭ್ಯತೆ :** ಸದರಿ ಯೋಜನೆಗೆ ಅರ್ಕಾವತಿ ಜಲಾಶಯದ ಕೆಳಭಾಗದ (ಸುಮಾರು 4 ಕಿ.ಮೀ) ನದಿಯ ಮುಳ್ಳಳ್ಳಿ ಸೇತುವೆ ಬಳಿಯಿಂದ ನೀರನ್ನು ಎತ್ತಿ ನೀರಾವರಿ ಸೌಲಭ್ಯದಿಂದ ವಂಚಿತರಾಗಿರುವ ಸದರಿ ಮೇಲ್ಕಂಡ ಗ್ರಾಮಗಳ ಜಮೀನುಗಳಿಗೆ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ. ಸದರಿ ಪ್ರಸ್ತಾವನೆಗೆ ದಿನಾಂಕ:10-01-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ 66ನೇ ಮಂಡಳಿಯ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

6. ಈ ಹಿನ್ನೆಲೆಯಲ್ಲಿ, Lifting of water from Arkavathy river below Arkavathy Reservoir near Mullalli bridge to provide Micro Irrigation system to the lands of Doddalahalli, Uyyamballi, Hegganuru and Yelagalli panchayath limits in Kanakapura Taluk (by utilising 225.28 mcft of water) ಯೋಜನೆಯ ರೂ.70.00 ಕೋಟಿ ಮೊತ್ತದ ವಿವರವಾದ ಯೋಜನಾ ವರದಿಗೆ

ಆಡಳಿತಾತ್ಮಕ ಅನುಮೋದನೆ ನೀಡುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

7. ಆರ್ಥಿಕ ಇಲಾಖೆಯು ತನ್ನ ದಿನಾಂಕ:13-06-2019 ರ ಟಿಪ್ಪಣಿಯಲ್ಲಿ ಈ ಕೆಳಕಂಡಂತೆ ಸಹಮತಿ ನೀಡಿರುತ್ತದೆ :

*"ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಪ್ರಸ್ತಾವನೆಯ ಕುರಿತು ಒಂದು ಬಾರಿ ಕ್ರಮವಾಗಿ ರೂ.70.00 ಕೋಟಿ ವೆಚ್ಚದಲ್ಲಿ ಸೂಕ್ಷ್ಮ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವ ಆಡಳಿತ ಇಲಾಖೆಯ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯಿಂದ ಸಹಮತಿ ನೀಡಲು ಮಾನ್ಯ ಮುಖ್ಯಮಂತ್ರಿಯವರು ಅನುಮೋದಿಸಿರುತ್ತಾರೆ. ಮುಂದುವರೆದು ಇನ್ನು ಮುಂದೆ ಸರ್ಕಾರದ ಅನುದಾನದಲ್ಲಿ ಸೂಕ್ಷ್ಮ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವ ಪ್ರಸ್ತಾವನೆಗಳನ್ನು ಬೆಂಬಲಿಸಲಾಗುವುದಿಲ್ಲವೆಂದು ಆಡಳಿತ ಇಲಾಖೆಗೆ ಸ್ಪಷ್ಟೀಕರಿಸಲು ಸಹ ಮಾನ್ಯ ಮುಖ್ಯಮಂತ್ರಿಯವರು ತಿಳಿಸಿರುತ್ತಾರೆ."*

8. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ : ಜಸಂಇ 10 ಎಂಎಂಕೆ 2019,
## ಬೆಂಗಳೂರು, ದಿನಾಂಕ : 01-07-2019

Lifting of water from Arkavathy river below Arkavathy Reservoir near Mullalli bridge to provide Micro Irrigation system to the lands of Doddalahalli, Uyyamballi, Hegganuru and Yelagalli panchayath limits in Kanakapura Taluk (by utilising 225.28 MCft. of water) ಯೋಜನೆಯ ರೂ.70.00 ಕೋಟಿ (ರೂಪಾಯಿ ಎಪ್ಪತ್ತು ಕೋಟಿಗಳು ಮಾತ್ರ) ಗಳ ಮೊತ್ತದ ವಿವರವಾದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು ಆರ್ಥಿಕ ಇಲಾಖೆಯು ತನ್ನ ಟಿಪ್ಪಣಿ ಸಂಖ್ಯೆ:ಆಇ 51 ಆಕೋ-1/2019, ದಿನಾಂಕ:13-06-2019, ರಲ್ಲಿ ನೀಡಲಾದ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
01/07/19

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ನೀರಾವರಿ (ದಕ್ಷಿಣ) ವಲಯ, ಮೈಸೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-360/2019, ದಿನಾಂಕ:14-06-2019).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.